# Coalition for Sex-workers and Sexual Minorities Rights

**#122/4, Infantry Road, Bangalore – 560001**

---

**ಪತ್ರಿಕಾ ಪ್ರಕಟಣೆ**

**ದಿನಾಂಕ : 06/09/2018, ಬೆಂಗಳೂರು**

ಐಪಿಸಿ 377ರ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅತೀವ ಸಂತಸ ಮತ್ತು ಸಂಭ್ರಮದಿಂದ ನಾವು ಸ್ವಾಗತಿಸುತ್ತಿದ್ದೇವೆ. ಲೈಂಗಿಕತೆ ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಬಗ್ಗೆ ಇರುವ ಈ ತೀರ್ಪು ಈ ಸಮುದಾಯಕ್ಕೆ ಸಂವಿಧಾನಾತ್ಮಕ ರಕ್ಷಣೆ ಮತ್ತು ಪೌರ ಹಕ್ಕುಗಳನ್ನು ಕೊಡುತ್ತದೆ. ಪ್ರಭುತ್ವ ಇತರ ಪೌರ ಸ್ವತಂತ್ರಗಳನ್ನು ಮತ್ತು ವಿರೋಧವನ್ನು ತುಂಬಾ ತೀವ್ರವಾಗಿ ಖಂಡಿಸಿ ಶಿಕ್ಷೆಗೆ ಈಡು ಮಾಡುತ್ತಿರುವ ಈ ಸಮಯದಲ್ಲಿ ಈ ತೀರ್ಪು ಒಂದು ಮಹತ್ವದ ಹೆಜ್ಜೆ ಮುಂದೆ ಇಟ್ಟಿದೆ. ಈ ತೀರ್ಪನ್ನು ಸಂಭ್ರಮಿಸುತ್ತಿರುವ ಈ ಸಮಯದಲ್ಲೂ ನಾವು ಆದಿವಾಸಿಗಳ, ದಲಿತರ, ರೈತರ, ವಿದ್ಯಾರ್ಥಿಗಳ ಮತ್ತು ಇತರ ಅಂಚಿಗೆ ದೂಡಲ್ಪಟ್ಟ ಸಮುದಾಯಗಳ ಹೊರಾಟಗಳನ್ನು ಮನಸ್ಸಿನಲ್ಲಿಟ್ಟುಕೊಂಡೇ ಮುಂದುವರೆಯ ಬೇಕು.

ಎಲ್‌ಜಿಬಿಟಿಕ್ಯೂಐ ಸಮುದಾಯದ ಪ್ರೀತಿ ಪ್ರೇಮಗಳನ್ನು, ಸಂಬಂಧಗಳನ್ನು ಮತ್ತು ಜಿವನಗಳನ್ನು ಐಪಿಸಿ ಕಲಂ 377 ಅಪರಾಧೀಕರಿಸಿರುವ ಹಿನ್ನೆಲೆಯಲ್ಲಿ ಇದರ ವಿರುದ್ಧ ಹೋರಾಟ ಅನೇಕ ಕಾಲದಿಂದ ನಡೆದುಬಂದು ಕಡೆಗೆ ಈ ಮಹತ್ತರ ತೀರ್ಪು ಒಂದು ಮೈಲಿಗಲ್ಲಾಗಿದೆ. ಈ ಹೋರಾಟದಲ್ಲಿ ನಮ್ಮ ಪ್ರಗತಿಪರ ಬೆಂಬಲಿಗರು ಸಮುದಾಯದವರು ಅನೇಕ ರೀತಿಯಲ್ಲಿ ತ್ಯಾಗ ಮಾಡಿ ಜೀವಗಳನ್ನೇ ಕೊಟ್ಟಿರುವುದನ್ನು ಇಂದು ನಾವು ನೆನೆಯಲೇ ಬೇಕು. ಈ ತೀರ್ಪು ತಳ ಸಮುದಾಯಗಳ ಬೀದಿಯಲ್ಲಿನ್ನ ನಿರಂತರ ಹೋರಾಟದ ಪರಿಣಾಮವಾಗಿದೆ. ಈ ಪರಿಣಾಮ ಅನೇಕ ಚಳುವಳಿಗಳ ಬೆಂಬಲ, ವೈಯಕ್ತಿಕ ವಕೀಲರು, ಮತ್ತು ಸಂಘಟನೆಗಳ, ವೈದ್ಯರು, ಮತ್ತು ಎಲ್‌ಜಿಬಿಟಿಕ್ಯೂಐ ಕುಟುಂಬಗಳ ಒಂದುಗೂಡಿ ಬಂದಿರುವ ಫಲವಾಗಿದೆ.

ಈ ತೀರ್ಪು ಸಂವಿಧಾನದಲ್ಲಿ ಎಲ್ಲಾ ಪ್ರಜೆಗಳಿಗೆ ಕೊಟ್ಟಿರುವ ಹಕ್ಕುಗಳನ್ನು ಮರುಸಾಬೀತು ಮಾಡಿದೆ. ಪ್ರತೀ ಮನುಷ್ಯರಿಗೆ ತಮ್ಮದಾಗಿರುವ ಹಕ್ಕುಗಳಾದ ಸ್ವತಂತ್ರ, ಸ್ವಾಯತ್ತತೆ. ಮತ್ತು ಘನತೆಯನ್ನು ಬಹುಸಂಖ್ಯಾತರ ಸ್ವಾಚ್ಛೆಗೆ ಬಿಟ್ಟುಕೊಡಲಾಗದೆಂದು ಶಕ್ತವಾಗಿ ನೆನಪಿಸುತ್ತದೆ ಈ ತೀರ್ಪು. ಭಾರತೀಯ ಸಂವಿಧಾನದ ಸಮಯಾತೀತ ನಿತ್ಯಹರಿತ ಲಕ್ಷಣಗುಳನ್ನು ಎಲ್ಲಾ ಐದು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ತೋರಿಸಿಕೊಟ್ಟಿದ್ದಾರೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪರಿಕಲ್ಪನೆಯಂತೆ ಸಮಾನತೆ, ಸಮತೆ ಮತ್ತು ತಾರತಮ್ಯ ರಹಿತ ಜೀವನ ಇಂದು ಸತ್ಯಕ್ಕೆ ಹತ್ತಿರವಾಗಿದೆ. ಈ ತೀರ್ಪು ಭಾರತ ಸರ್ಕಾರಕ್ಕೆ ಅದರ ಅಧಿಕಾರಿಗಳಿಗೆ, ಪೋಲೀಸ್, ಮತ್ತು ಆರೋಗ್ಯ ಸೇವೆ ಕೊಡುವ ಅಧಿಕಾರಿಗಳನ್ನು ಸಮಯಾಸಮಯಕ್ಕೆ ಸೂಕ್ಷ್ಮೀಕರಿಸಲು ಬಾಧ್ಯತೆ ಕೊಡುತ್ತದೆ. ಮಾಧ್ಯಮಗಳಿಗೆ ಈ

ತೀರ್ಪಿನ ಬಗ್ಗೆ ಹೆಚ್ಚು ಪ್ರಚಾರ ಮಾಡಲು ನಿರ್ದೇಶಿಸುತ್ತದೆ. ಆದರೇ ಈ ಚಳುವಳೀ ಇಲ್ಲಿಗೇ ನಿಲ್ಲುವುದಿಲ್ಲ. ಇನ್ನೂ ಅನೇಕ ಹೊರಾಟಗಳನ್ನು ಸಾಮಾಜಿಕ ಒಪ್ಪಿಗೆ ಮತ್ತು ಸಂಪೂರ್ಣ ಪೌರತ್ವಕ್ಕೆ ಮುಂದುವರೆಸ ಬೇಕಾಗಿದೆ.

ಐಪಿಸಿ 377 ವ್ಯವಸ್ತಿತ ತಾರತಮ್ಯದ ( ಹೋಮೋಫ಼ೋಬಿಯಾ) ಮುಖವಾಗಿತ್ತು. ಈ ತೀರ್ಪು ಈ ವ್ಯವಸ್ತಿತ ತಾರತಮ್ಯಕ್ಕೆ ಒಂದು ಗತಿಕಾಣಿಸಿ , ಸಮಾನತೆ ಹಾಗು ಗೌರವಕ್ಕೆ ಹಮ್ಮಿಕೊಂಡಿರುವ ನಮ್ಮ ಹೋರಾಟಕ್ಕೆ ಬೆಂಬಲವಾಗಿದೆ.

ನ್ಯಾಯವಾದಿ ಚಂದ್ರಚೂಡ್ ಅವರು, ಅವರ ತೀರ್ಪಿನಲ್ಲಿ "ಸಂವಿಧಾನಿಕ ನೈತಿಕತೆಯನ್ನು ಎತ್ತಿಹಿಡಿಯುತ್ತ, ಎಲ್‌ಜಿಬಿಟಿಕ್ಯು ಸಮುದಾಯದ ಹಕ್ಕಿನ ರಕ್ಷಣೆ ಕೇವಲ ಅಲ್ಪಸಂಖ್ಯಾತರಿಗೆ ಸಂವಿಧಾನ ಅವರಿಗೆ ಉದ್ದೇಶಿರುವ ನ್ಯಾಯಬದ್ದ ಸ್ಥಾನವನ್ನು ಕೊಡುವುದರ ಬಗ್ಗೆ ಮಾತ್ರವಲ್ಲ, ಇದು ನಾವು ಯಾವ ಮಾದರಿಯ ದೇಶವನ್ನು ಕಟ್ಟಲು ಹೊರಟಿದ್ದೇವೆ ಹಾಗು ಇದರಲ್ಲಿ ಬಹುಸಂಖ್ಯಾತರಿಗೆ ಸಹ ಒಂದು ಸಂದೇಶವಿದೆ" ಎಂದು ಒತ್ತಾಯಿಸಿದರು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

Ayaan Syed 9916278241

Uma 9591775020